# ಕರ್ನಾಟಕ ವಿಧಾನ ಪರಿಷತ್ತು

**01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2567**

**02. ಸದಸ್ಯರ ಹೆಸರು : ಶ್ರೀ ಮುನಿರಾಜುಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು)**

**03. ಉತ್ತರಿಸುವ ದಿನಾಂಕ : 24.03.2022**

**04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪೊಲೀಸ್ ಇಲಾಖೆಯು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದು, ರಾಜ್ಯಾದಾದ್ಯಂತ ಕಲ್ಯಾಣ ಮಂಟಪ ಮತ್ತು ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಕುರಿತು ಸರ್ಕಾರದ ನಿಲುವೇನು: (ಕಲ್ಯಾಣ ಮಂಟಪ ಮತ್ತು ಶಿಕ್ಷಣ ಸಂಸ್ಥೆಗಳ ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿದೆ.<br>ಪೊಲೀಸ್ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ಪೊಲೀಸ್ ಸಿಬ್ಬಂದಿ/ಅಧಿಕಾರಿ ರವರು ಮತ್ತು ಅವರ ಕುಟುಂಬಗಳಿಗೆ ಕಡಿಮೆ ವೆಚ್ಚದಲ್ಲಿ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಕಲ್ಯಾಣಕ್ಕಾಗಿ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದ್ದು, ಇದಕ್ಕೆ ಸರ್ಕಾರದಿಂದ ಅನುದಾನ ನೀಡಲಾಗುತ್ತದೆ.<br>ಅಪರಾಧ ಪತ್ತೆ ಇತ್ಯಾದಿ ಕಾರ್ಯದಲ್ಲಿ ತೊಡಗುವ ಪೊಲೀಸ್ ಸಿಬ್ಬಂದಿಗಳ ಮಕ್ಕಳ ಬಗ್ಗೆ ಗಮನಹರಿಸಲು ಸಾಧ್ಯವಾಗದ ಕಾರಣ ಅವರಿಗೆ ಉತ್ತಮ ಶಿಕ್ಷಣ ನೀಡಬೇಕು ಎಂಬ ಉದ್ದೇಶದಿಂದ ಶಾಲೆಗಳನ್ನು ಸ್ಥಾಪಿಸಲಾಗಿದೆ.<br>ಅದೇ ರೀತಿ ವಿವಾಹ ಮತ್ತಿತರ ಸಮಾರಂಭಗಳಿಗಾಗಿ ಕಡಿಮೆ ದರದಲ್ಲಿ ಕಲ್ಯಾಣ ಮಂಟಪ ಸಿಗಲಿ ಎಂಬ ಉದ್ದೇಶದಿಂದ ಕಲ್ಯಾಣ ಮಂಟಪಗಳನ್ನು ಸ್ಥಾಪಿಸಲಾಗಿರುತ್ತದೆ.<br>ವಿವರ ಅನುಬಂಧ 'ಎ' ರಲ್ಲಿ ಲಗತ್ತಿಸಿದೆ. |
| ಆ) | ಪೊಲೀಸ್ ಇಲಾಖೆಯು ಕಲ್ಯಾಣ ಮಂಟಪ ಮತ್ತು ಶಿಕ್ಷಣ ಸಂಸ್ಥೆಗಳನ್ನು ಯಾವ ನೈತಿಕತೆಯ ಆಧಾರದಲ್ಲಿ ನಡೆಸಲಾಗುತ್ತಿದೆ; | |
| ಇ) | ಪೊಲೀಸ್ ಇಲಾಖೆಯು ಕಲ್ಯಾಣ ಮಂಟಪ ಮತ್ತು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದರಿಂದ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ, ಸಿಬ್ಬಂದಿಗಳ ಕೊರತೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪೊಲೀಸ್ ಇಲಾಖೆಯ ಶಿಕ್ಷಣ ಸಂಸ್ಥೆಗಳಿಗೆ ಪ್ರತ್ಯೇಕವಾಗಿ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳನ್ನು (ಗುತ್ತಿಗೆ) ವೇತನ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದ್ದು, ಕಲ್ಯಾಣ ಮಂಟಪ ನಿರ್ವಹಣೆಗೆ ಬೆರಳೆಣಿಕೆ ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗುತ್ತಿದ್ದು, ತುರ್ತು ಸಂಧರ್ಭದಲ್ಲಿ ಇವರನ್ನು ಕರ್ತವ್ಯಕ್ಕೆ ನಿಯೋಜಿಸಿಕೊಳ್ಳಲಾಗುತ್ತದೆ. ಆದ್ದರಿಂದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ, ಸಿಬ್ಬಂದಿಗಳ ಕೊರತೆ ಉಂಟಾಗಿರುವುದಿಲ್ಲ. |
| ಈ) | ಕಳೆದ ಮೂರು ವರ್ಷದಲ್ಲಿ ಕಲ್ಯಾಣ ಮಂಟಪ ಮತ್ತು ಶಿಕ್ಷಣ ಸಂಸ್ಥೆಗಳಿಂದ ಬಂದಿರುವ ಆದಾಯವೆಷ್ಟು? (ಕಲ್ಯಾಣ ಮಂಟಪ ಮತ್ತು ಶಿಕ್ಷಣ ಸಂಸ್ಥೆವಾರು ಸಂಪೂರ್ಣ ವಿವರ ನೀಡುವುದು) | ವಿವರಗಳನ್ನು ಅನುಬಂಧ 'ಬಿ' ರಲ್ಲಿ ಲಗತ್ತಿಸಿದೆ. |

**HD/56/PPS/2022**

(ಆರಗ ಜ್ಞಾನೇಂದ್ರ)
**ಮಾನ್ಯ ಗೃಹ ಸಚಿವರು**

## ಅನುಬಂಧ –ಎ

| ಕ್ರ.ಸಂ | ಕಲ್ಯಾಣ ಮಂಟಪಗಳು | ಕ್ರ.ಸಂ | ಶಿಕ್ಷಣ ಸಂಸ್ಥೆಗಳು |
|---|---|---|---|
| 1 | ಬೆಂಗಳೂರು ನಗರ | 1 | ಪೋಲೀಸ್ ಪಬ್ಲಿಕ್ ಸ್ಕೂಲ್ ಕೋರಮಂಗಲ ಬೆಂಗಳೂರು |
| 2 | ಮೈಸೂರು ನಗರ | 2 | ಪೋಲೀಸ್ ಪಬ್ಲಿಕ್ ಸ್ಕೂಲ್ ಮೈಸೂರು ನಗರ |
| 3 | ತುಮಕೂರು ಜಿಲ್ಲೆ | 3 | ಪೋಲೀಸ್ ಪಬ್ಲಿಕ್ ಸ್ಕೂಲ್ 6ನೇ ಪಡೆ, ಕೆಎಸ್‌ಆರ್‌ಪಿ, ಕಲಬುರಗಿ |
| 4 | ರಾಯಚೂರು ಜಿಲ್ಲೆ | 4 | ಪೋಲೀಸ್ ಪಬ್ಲಿಕ್ ಸ್ಕೂಲ್ 8ನೇ ಪಡೆ, ಕೆಎಸ್‌ಆರ್‌ಪಿ, ಶಿವಮೊಗ್ಗ |
| 5 | ಚಿತ್ರದುರ್ಗ ಜಿಲ್ಲೆ | 5 | ಪೋಲೀಸ್ ಪಬ್ಲಿಕ್ ಸ್ಕೂಲ್ 10ನೇ ಪಡೆ, ಕೆಎಸ್‌ಆರ್‌ಪಿ, ಶಿಗ್ಗಾವಿ |
| 6 | ದಕ್ಷಿಣ ಕನ್ನಡ ಜಿಲ್ಲೆ | 6 | ಶ್ರೀ ಎನ್.ಎ.ಮುತ್ತಣ್ಣ ಸ್ಮಾರಕ ಪೋಲಿಶ್ ಮಕ್ಕಳ ವಸತಿ ಶಾಲೆ, ಧಾರವಾಡ |

ಅನುಬಂಧ-"ಬಿ"

**ಶಿಕ್ಷಣ ಸಂಸ್ಥೆಗಳು**

| ಕ್ರ.ಸಂ | ಶಿಕ್ಷಣ ಸಂಸ್ಥೆಯ ಹೆಸರು | ಕಳೆದ ಮೂರು ವರ್ಷದ ಆದಾಯ |
|---|---|---|
| 1 | ಪೊಲೀಸ್ ಪಬ್ಲಿಕ್ ಸ್ಕೂಲ್ ಕೋರಮಂಗಲ ಬೆಂಗಳೂರು | ವಿದ್ಯಾರ್ಥಿಗಳಿಂದ ಪಡೆದ ಶುಲ್ಕದಿಂದ ಶಿಕ್ಷಕ ವೃಂದದವರಿಗೆ ವೇತನವನ್ನು ನೀಡಲಾಗುತ್ತಿದ್ದು, ಯಾವುದೇ ಲಾಭ-ನಷ್ಟ ಇರುವುದಿಲ್ಲ |
| 2 | ಪೊಲೀಸ್ ಪಬ್ಲಿಕ್ ಸ್ಕೂಲ್ ಮೈಸೂರು ನಗರ | ರೂ.92,16,955/- |
| 3 | ಪೊಲೀಸ್ ಪಬ್ಲಿಕ್ ಸ್ಕೂಲ್ 6ನೇ ಪಡೆ, ಕೆಎಸ್ಆರ್‌ಪಿ, ಕಲಬುರಗಿ | ರೂ.95,989/- |
| 4 | ಪೊಲೀಸ್ ಪಬ್ಲಿಕ್ ಸ್ಕೂಲ್ 8ನೇ ಪಡೆ, ಕೆಎಸ್ಆರ್‌ಪಿ, ಶಿವಮೊಗ್ಗ | ಪೊಲೀಸ್ ಮಕ್ಕಳಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಶಾಲೆಯನ್ನು ಪ್ರಾರಂಭಿಸಲಾಗಿದ್ದು ಯಾವುದೇ ಲಾಭದ ಉದ್ದೇಶದಿಂದ ನಡೆಸಲಾಗುತ್ತಿರುವುದಿಲ್ಲ. |
| 5 | ಪೊಲೀಸ್ ಪಬ್ಲಿಕ್ ಸ್ಕೂಲ್ 10ನೇ ಪಡೆ, ಕೆಎಸ್ಆರ್‌ಪಿ, ಶಿಗ್ಗಾವಿ | ರೂ.4,84,667/- |
| 6 | ಶ್ರೀ ಎನ್.ಎ.ಮುತ್ತಣ್ಣ ಸ್ಮಾರಕ ಪೊಲೀಶ್ ಮಕ್ಕಳ ವಸತಿ ಶಾಲೆ, ಧಾರವಾಡ | ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯಲ್ಲಿ ಕಲ್ಯಾಣ ಕಾರ್ಯಕ್ರಮದ ಮೂಲಭೂತ ಸೌಲಭ್ಯದಡಿಯಲ್ಲಿ ಪೊಲೀಸ್ ಮಕ್ಕಳಿಗೆ ಉಚಿತವಾಗಿ ಶಿಕ್ಷಣವನ್ನು ನೀಡಲಾಗುತ್ತಿದೆ. |

**ಕಲ್ಯಾಣ ಮಂಟಪದ ಹೆಸರು ಮತ್ತು ಆದಾಯದ ವಿವರ**

| ಕ್ರ.ಸಂ | ಘಟಕ | ಕಳೆದ ಮೂರು ವರ್ಷದ ಆದಾಯ |
|---|---|---|
| 1 | ಬೆಂಗಳೂರು ನಗರ | ರೂ.36,04,264/- |
| 2 | ಮೈಸೂರು ನಗರ | ರೂ.3,63,71,648 |
| 3 | ತುಮಕೂರು ಜಿಲ್ಲೆ | ರೂ.39,55,000/- |
| 4 | ರಾಯುಚೂರು ಜಿಲ್ಲೆ | ರೂ.39,000/- |
| 5 | ಚಿತ್ರದುರ್ಗ ಜಿಲ್ಲೆ | ರೂ.13,39,400/- |
| 6 | ದಕ್ಷಿಣ ಕನ್ನಡ ಜಿಲ್ಲೆ | ರೂ.5,000/- |
| 7 | ಕೊಡಗು ಜಿಲ್ಲೆ | ರೂ.6,85,500/- |
| 8 | ಗದಗ ಜಿಲ್ಲೆ | ರೂ.10,61,192/- |
| 9 | ಬಾಗಲಕೋಟೆ | ರೂ.53,600/- |
| 10 | ಪಿಟಿಎಸ್ ಕಲಬುರಗಿ | ರೂ.4,15,000/- |